## 8. ಯಾವುದು ಟೀಕೆ, ಯಾವುದು ನ್ಯಾಯಾಂಗ ನಿಂದನೆ

ಇತ್ತೀಚೆಗೆ ಹಿರಿಯ ವಕೀಲ ಪ್ರಶಾಂತ್ ಭೂಷಣ್ ನ್ಯಾಯಾಂಗ ನಿಂದನೆ ಪ್ರಕರಣದಲ್ಲಿ ಇಲ್ಲಿ ಎಂದು ಸುಪ್ರೀಂಕೋರ್ಟ್ ತೀರ್ಪು ನೀಡಿದೆ. ಭೂಷಣ್ ಮಾಡಿದ ಎರಡು ಟ್ವೀಟ್‌ಗಳ ಆಧಾರದಲ್ಲಿ ಈ ತೀರ್ಪು ಬಂದಿದೆ. ಒಂದು, ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಾಮೂರ್ತಿಗಳು ದುಬಾರಿ ಮೋಟರ್ ಸೈಕಲ್ ಮೇಲೆ ಕುಳಿತಿದ್ದ ಫೋಟೋಕ್ಕೆ ಸಂಬಂಧಿಸಿದ ಟ್ವೀಟ್, ಇನ್ನೊಂದು, ಪ್ರಜಾಪ್ರಭುತ್ವವನ್ನು ನಾಶಪಡಿಸುವಲ್ಲಿ ಮಹತ್ವದ ಪಾತ್ರ ವಹಿಸಿದೆ ಎಂಬ ಟ್ವೀಟ್.

ಕ್ರಿಮಿನಲ್ ನ್ಯಾಯಾಂಗ ನಿಂದನೆ: ಈ ಲೇಖನದಲ್ಲಿ ಕ್ರಿಮಿನಲ್ ನ್ಯಾಯಾಂಗ ನಿಂದನೆಯ ಬಗ್ಗೆ ಮಾತ್ರ ಗಮನಹರಿಸೋಣ, ಕೋರ್ಟ್‌ಗಳ ಆದೇಶವನ್ನು ಬೇಕಂತಲೇ ಧಿಕ್ಕರಿಸುವ ಉದ್ದೇಶಪೂರ್ವಕ ತಕರಾರುವಾದಿಗಳದು ಬೇರೆಯದೇ ವಿಚಾರ.

1971ರ ನ್ಯಾಯಾಂಗ ನಿಂದನೆ ಕಾಯ್ದೆಯ ಸೆಕ್ಷನ್ 2(ಸಿ) ಪ್ರಕಾರ ಕ್ರಿಮಿನಲ್ ನ್ಯಾಯಾಂಗ ನಿಂದನೆ ಅಂದರೆ ಯಾವುದೇ ನ್ಯಾಯಾಲಯದ ಅಧಿಕಾರ ಹಾಗೂ ಘನತೆಗೆ ಚ್ಯುತಿ ತರುವ ವಿಷಯಗಳನ್ನು ಪ್ರಕಟಿಸುವುದು ಅಥವಾ ಅಂತಹ ಚಟುವಟಿಕೆಗಳನ್ನು ಕೈಗೊಳ್ಳುವುದು; ಅಥವಾ ಯಾವುದೇ ನ್ಯಾಯಾಲಯದ ವಿಚಾರಣೆಯಲ್ಲಿ ಮಧ್ಯಪ್ರವೇಶ ಮಾಡುವುದು ಅಥವಾ ಪೂರ್ವಗ್ರಹಪೀಡಿತವಾಗಿ ಅದಕ್ಕೆ ಅಡ್ಡಿಪಡಿಸುವುದು; ಅಥವಾ ನ್ಯಾಯದಾನ ಪ್ರಕ್ರಿಯೆಗೆ ತೊಂದರೆ ಉಂಟುಮಾಡುವುದು;

ಹಾಗಿದ್ದರೆ ನ್ಯಾಯಾಂಗವನ್ನು ಯಾರೂ ಟೀಕಿಸಲೇ ಬಾರದು ಎಂಬುದು ಇದರರ್ಥವೇ? ಅಲ್ಲ. ಭಾರತದ ನ್ಯಾಯಾಲಯಗಳ ಕಾರ್ಯನಿರ್ವಹಣೆಯ ಬಗ್ಗೆ ನೀವು ಏನು ಹೇಳುವುದಕ್ಕೆ ಕಾನೂನಿನಲ್ಲಿ ಅವಕಾಶವಿದೆ ಎಂಬುದೇ ಈ ಲೇಖನದ ಮೂಲ ತಿರುಳು. ನಮ್ಮ ದೇಶದ ಕಾನೂನಿನಲ್ಲಿ ಟೀಕೆಗೂ ನ್ಯಾಯಾಂಗ ನಿಂದನೆಗೂ ನಡುವೆ ತೆಳುವಾದ ಗೆರೆ ಮಾತ್ರ ಇದೆ.

ದೇಶದ ಸಂವಿಧಾನದಲ್ಲಿ ಭಾರತದ ಪ್ರತಿಯೊಬ್ಬ ಪ್ರಜೆಗೂ ಸೆಕ್ಷನ್ 19(1)(ಎ) ಅಡಿ ಅಭಿವ್ಯಕ್ತಿ ಸ್ವಾತಂತ್ರ್ಯವೆಂಬ ಮೂಲಭೂತ ಹಕ್ಕು ನೀಡಲಾಗಿದೆ. ಇದಕ್ಕೆ ಸೆಕ್ಷನ್ (19)(2)ರಲ್ಲಿ ಕೆಲ ನಿರ್ಬಂಧಗಳನ್ನು ವಿಧಿಸಲಾಗಿದೆ. ಸಿ.ಕೆ.ದಫ್ತರಿ ವರ್ಸಸ್ ಒ.ಪಿ.ಗುಪ್ತಾ (1971) ಪ್ರಕರಣದಲ್ಲಿ ಸುಪ್ರೀಂಕೋರ್ಟ್ ದೇಶದಲ್ಲಿ ಜಾರಿಯಲ್ಲಿರುವ ಕ್ರಿಮಿನಲ್ ನ್ಯಾಯಾಂಗ ನಿಂದನೆ ಕಾಯ್ದೆ ಕೂಡ ಅಂತಹ ನಿಬಂಧಗಳಲ್ಲಿ ಒಂದು ಎಂದು ಹೇಳಿದೆ. ಹಾಗಂತ ನ್ಯಾಯಾಂಗ ನಿಂದನೆಯ ಭೀತಿಯಿಂದ ಯಾರೂ ನ್ಯಾಯಾಂಗದ ವಿರುದ್ಧ ತಮ್ಮ ಸಿಟ್ಟನ್ನು ಹೊರಹಾಕುವಂತಿಲ್ಲ ಎಂಬುದು ಇದರರ್ಥವಲ್ಲ.

1968ರಷ್ಟು ಹಿಂದೆಯೇ ಲಾರ್ಡ್ ಡೆನ್ನಿಂಗ್ ಎಂ.ಆರ್.ಅವರು ನ್ಯಾಯಾಂಗ ನಿಂದನೆಯ ವಿಷಯದಲ್ಲಿ ಮಾರ್ಗಸೂಚಿಗಳನ್ನು ಸಿದ್ಧಪಡಿಸಿಕೊಟ್ಟಿದ್ದಾರೆ. ಅವರು, ನ್ಯಾಯಾಂಗ ನಿಂದನೆಯೆಂಬುದು ಕೋರ್ಟ್‌ಗಳ ಘನತೆಯನ್ನು ಎತ್ತಿಹಿಡಿಯುವ ಮಾರ್ಗವಲ್ಲ. ನ್ಯಾಯಾಂಗ ನಿಂದನೆ ಕಾಯ್ದೆಯನ್ನು ಮಿತವಾಗಿ ಬಳಸಬೇಕು ಮತ್ತು ಅಭಿವ್ಯಕ್ತಿ ಸ್ವಾತಂತ್ರವನ್ನು ರಕ್ಷಿಸುವುದು ಎಲ್ಲಕ್ಕಿಂತ ಮುಖ್ಯ. ಇಲ್ಲಿ ಟೀಕೆಗಳಿಗೆ ಸದಾ ಸ್ವಾಗತವಿರಬೇಕು. ಆದರೆ, ನ್ಯಾಯಯುತವಾಗಿರಬೇಕು. ಏಕೆಂದರೆ ಜಡ್ಜ್‌ಗಳು ತಾವಿರುವ ಸ್ಥಿತಿಯಲ್ಲಿ ಎಲ್ಲಾ ಟೀಕೆಗಳಿಗೂ ಉತ್ತರ ನೀಡಲು ಸಾಧ್ಯವಾಗುವುದಿಲ್ಲ ಎಂದು ಅವರು ಹೇಳಿದ್ದಾರೆ

ಹಾಗಿದ್ದರೆ ಯಾವ ರೀತಿಯ ಟೀಕೆಗೆ ಭಾರತದ ನ್ಯಾಯಾಂಗದಲ್ಲಿ ಅನುಮತಿಯಿದೆ ಮತ್ತು ಯಾವುದಕ್ಕೆ ಅನುಮತಿಯಿಲ್ಲ? ಸುಪ್ರೀಂಕೋರ್ಟ್ ಹೇಳಿರುವ ಪ್ರಕಾರ, ಒಬ್ಬ ಕರ್ತವ್ಯನಿರತ ನ್ಯಾಯಮೂರ್ತಿಯ ಕಾರ್ಯವಿಧಾನದ ಬಗ್ಗೆ ಟೀಕೆ ಮಾಡಿದ್ದರೆ ಅದು ನ್ಯಾಯಯುತವಾಗಿದೆಯೋ ಅಥವಾ ದುರುದ್ದೇಶಪೂರಿತವಾಗಿದೆಯೋ ಎಂಬುದನ್ನು ನೋಡಬೇಕು. ಜಡ್ಜ್ ವಿರುದ್ಧ ವೈಯಕ್ತಿಕವಾಗಿ ಟೀಕೆ ಮಾಡಿದ್ದರೆ ಆಗ ನ್ಯಾಯಾಲಯವು ಆ ಟೀಕೆಯಿಂದ ನ್ಯಾಯಮೂರ್ತಿಗಳ ಆಡಳಿತಕ್ಕೆ ಧಕ್ಕೆಯಾಗುತ್ತಿದೆಯೋ ಅಥವಾ ಅದು ಕೇವಲ ಮಾನಹಾನಿಕಾರಕವಾಗಿದೆಯೋ ಎಂಬುದನ್ನು ಗಮನಿಸಬೇಕು. ತನ್ಮೂಲಕ ನ್ಯಾಯಾಲಯವು ಆ ಹೇಳಿಕೆಯು ನ್ಯಾಯಯುತವೋ, ನಂಬಿಕೆಗೆ ಅರ್ಹವೋ, ಮಾನಹಾನಿಕಾರಕವೋ ಅಥವಾ ನ್ಯಾಯಾಂಗ ನಿಂದನೆಯೋ ಎಂಬುದನ್ನು ನಿರ್ಧರಿಸಬೇಕು.

ಯಾವುದೇ ಹೇಳಿಕೆಯು ನ್ಯಾಯಮೂರ್ತಿಗಳ ವೈಯಕ್ತಿಕ ನಡೆಯ ಬಗ್ಗೆ ನೀಡಿದ ಹೇಳಿಕೆಯಾಗಿದ್ದು, ಅದರಿಂದ ಅವರು ತಮ್ಮ ನ್ಯಾಯಾಂಗದ ಕರ್ತವ್ಯ ನಿರ್ವಹಿಸುವುದಕ್ಕೆ ಯಾವುದೇ ಅಡ್ಡಿ ಆಗದಿದ್ದರೆ ಅದು

ಕ್ರಿಮಿನಲ್ ನ್ಯಾಯಾಂಗ ನಿಂದನೆಯಾಗುವುದಿಲ್ಲ. ಜಡ್ಜ್‌ಗಳು ವೈಯಕ್ತಿಕವಾಗಿ ಎದುರಿಸಬೇಕಾಗಿ ಬರುವ ಟೀಕೆ ಟಿಪ್ಪಣಿಗಳಿಂದ ನ್ಯಾಯಾಂಗ ನಿಂದನೆ ಕಾಯ್ದೆಯು ಅವರಿಗೆ ರಕ್ಷಣೆ ನೀಡುವುದಿಲ್ಲ. ಅಂತಹ ಹೇಳಿಕೆಯ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಬಹುದಷ್ಟೆ. ನ್ಯಾಯಾಂಗದ ಆಡಳಿತವನ್ನು ನಿಭಾಯಿಸುವುದಕ್ಕೆ ಅಡ್ಡಿಪಡಿಸುವ ಅಥವಾ ಕೋರ್ಟ್‌ಗಳ ಕಾರ್ಯನಿರ್ವಹಣೆಗೆ ಧಕ್ಕೆ ಉಂಟುಮಾಡುವ ಹೇಳಿಕೆಗಳು ಮಾತ್ರ ನ್ಯಾಯಾಂಗ ನಿಂದನೆಯ ಹೇಳಿಕೆಗಳಾಗುತ್ತವೆ. ಏಕೆಂದರೆ, ಕಾನೂನುಗಳ ಪಾಲನೆಯ ವಿಷಯದಲ್ಲಿ ಸಾರ್ವಜನಿಕರಿಗೆ ನ್ಯಾಯಾಂಗದ ಬಗ್ಗೆ ಗೌರವವಿರಬೇಕಾಗಿರುವುದು ಬಹಳ ಮುಖ್ಯ. ಒಬ್ಬ ನ್ಯಾಯಮೂರ್ತಿಯ ಅಧಿಕೃತ ಕಾರ್ಯನಿರ್ವಹಣೆಯ ವಿರುದ್ಧ ನಡೆಸುವ ವಾಗ್ದಾಳಿಯು, ಅದು ತೀರ್ಪಿನ ಕುರಿತಾದ ನ್ಯಾಯಯುತ ಟೀಕೆಯಾಗಿರದೆ ಇದ್ದರೆ, ಇಡೀ ನ್ಯಾಯಾಂಗವನ್ನು ಅವಹೇಳನ ಮಾಡಿದಂತಾಗುವುದರಿಂದ ಅಂತಹ ಹೇಳಿಕೆ ನ್ಯಾಯಾಂಗದ ನಿಂದನೆಯಾಗುತ್ತದೆ.

**ವಿವಿಧ ಉದಾಹರಣೆಗಳು:** ನ್ಯಾಯಾಂಗ ನಿಂದನೆ ಕಾಯ್ದೆಯ ಸೆಕ್ಷನ್ 4 ಮತ್ತು 5 ಇವು ಮಾನನಷ್ಟ ಪ್ರಕರಣಗಳಲ್ಲಿ ಒಬ್ಬ ವ್ಯಕ್ತಿಗೆ ಹೇಗೆ ರಕ್ಷಣೆ ಸಿಗುತ್ತದೆಯೋ ಹೆಚ್ಚುಕಮ್ಮಿ ಅದೇ ಮಾದರಿಯಲ್ಲಿವೆ. ಅಂದರೆ, ಟೀಕೆಯು ನ್ಯಾಯಯುತವಾಗಿರಬೇಕು ಎಂದೇ ಇವು ಹೇಳುತ್ತವೆ. ಎಸ್.ಮುಗೋಲ್ಕರ್ ವರ್ಸಸ್ ಅನಾಮಧೇಯ (1978) ಪ್ರಕರಣದಲ್ಲಿ ನ್ಯಾಯಾಂಗವು ನ್ಯಾಯಯುತ ಟೀಕೆಗೆ ಹೊರತಾದುದಲ್ಲ ಎಂದು ಸುಪ್ರೀಂಕೋರ್ಟ್ ಹೇಳಿತ್ತು. ದುರುದ್ದೇಶಪೂರಿತವಾಗಿ ಜನರ ದೃಷ್ಟಿಯಲ್ಲಿ ನ್ಯಾಯಾಂಗದ ಘನತೆಗೆ ಧಕ್ಕೆ ತರುವುದಕ್ಕೆಂದೇ ಅಥವಾ ನ್ಯಾಯಾಲಯದ ಕಲಾಪದ ಮೇಲೆ ಪ್ರಭಾವ ಬೀರುವುದಕ್ಕೆಂದೇ ನೀಡುವ ಹೇಳಿಕೆಯು ಮಾತ್ರ ನ್ಯಾಯಾಂಗದ ನಿಂದನೆಯಾಗುತ್ತದೆ ಎಂದು ತಿಳಿಸಿತ್ತು. ಮುಖ್ಯ ನ್ಯಾಯಮೂರ್ತಿ ಎಂ.ಎಚ್. ಬೇಗ್ ಅವರು, 'ಕೆಲವೊಮ್ಮೆ ನ್ಯಾಯಾಂಗವು ತನ್ನ ಕಾರ್ಯವಿಧಾನದ ಬಗ್ಗೆ ದುರುದ್ದೇಶಪೂರಿತವಾಗಿ ಬರುವ ಟೀಕೆಯ ಬಗ್ಗೆಯೂ ಸಾಕಷ್ಟು ಔದಾರ್ಯ ತೋರುವುದುಂಟು. ಏಕೆಂದರೆ ಅದರಲ್ಲಿ ನ್ಯಾಯಾಂಗದ ಸುಧಾರಣೆಗೆ ಪೂರಕವಾದ ಯಾವುದೋ ಅಂಶವಿದ್ದಿರುತ್ತದೆ' ಎಂದು ಹೇಳಿದ್ದರು.

ಇದೇ ನ್ಯಾಯಾಧೀಶ ಬೇಗ್ ತಮ್ಮ ನಿವೃತ್ತಿಯ ನಂತರ ನ್ಯಾಯಾಧೀಶ. ಎಚ್.ಆರ್.ಖನ್ನಾ ಅವರು ಎಡಿಎಂ ಜಬಲ್ಪುರ ಪ್ರಕರಣ (1976)ರಲ್ಲಿ ತಮ್ಮ ಪ್ರಸಿದ್ಧ ಭಿನ್ನ ತೀರ್ಪಿನ ಮೂಲಕ ಕಾನೂನಿಗೆ ಯಾವುದೇ ಕೊಡುಗೆ ನೀಡಲಿಲ್ಲ. ಬದಲಿಗೆ ಸ್ವಂತ ಪ್ರಸಿದ್ಧಿ ಹೆಚ್ಚಿಸಿಕೊಂಡರು ಎಂದು ಹೇಳಿದ್ದರು. ಈ ಬಗ್ಗೆ ಅಲಹಾಬಾದ್ ಹೈಕೋರ್ಟ್‌ನಲ್ಲಿ ನ್ಯಾಯಾಂಗ ನಿಂದನೆ ದೂರು ದಾಖಲಾಗಿತ್ತು. ತೀರ್ಪು ನೀಡಿದ ಕೋರ್ಟ್, ಬ್ರಹ್ಮಪ್ರಕಾಶ್ ಶರ್ಮಾ (1953) ಪ್ರಕರಣವನ್ನು ಉಲ್ಲೇಖಿಸಿ ಈ ಪ್ರಕರಣದಲ್ಲಿ ಈ ಪ್ರಕರಣದಲ್ಲಿ ನ್ಯಾಯಾಧೀಶ ಬೇಗ್ ನ್ಯಾಯಾಂಗ ನಿಂದನೆ ಮಾಡಿದಂತಾಗುವುದಿಲ್ಲ ಎಂದು ಹೇಳಿತ್ತು.

ದೇಶದ ಮಾಜಿ ಕಾನೂನು ಸಚಿವ ಪಿ.ಶಿವಶಂಕರ್ ಅವರು ಸುಪ್ರೀಂಕೋರ್ಟ್ ನೀಡಿದ ಮಹತ್ವದ ತೀರ್ಪುಗಳ ಬಗ್ಗೆ ಒಮ್ಮೆ ವಿವಾದಾಸ್ಪದ ಹೇಳಿಕೆ ನೀಡಿದ್ದರು. 'ಕೇಶವಾನಂದರಂತಹ ಮಹಾಧಿಪತಿಗಳು ಹಾಗೂ ಗೋಲಕನಾಥ್‌ರಂತಹ ಜಮೀನ್ದಾರರ ಬಗ್ಗೆ ದೇಶದಲ್ಲಿ ಯಾರಿಗೂ ಅನುಕಂಪವಿಲ್ಲ. ಆದರೆ ಸುಪ್ರೀಂಕೋರ್ಟ್‌ಗೆ ಮಾತ್ರ ಇದೆ... ಕೂಪರ್ ಪ್ರಕರಣದಲ್ಲಿ ಸುಪ್ರೀಂಕೋರ್ಟ್‌ನ ಮಧ್ಯಪ್ರದೇಶದಿಂದಾಗಿ ಬ್ಯಾಂಕಿಂಗ್ ದಿಗ್ಗಜರಿಗೆ ಹೆಚ್ಚು ಪರಿಹಾರಧನ ಸಿಗುವಂತಾಯಿತು... ಫೆರಾ ಉಲ್ಲಂಘನೆ ಮಾಡುವವರು ಸೊಸೆಗೆ ಬೆಂಕಿ ಹಚ್ಚುವವರು ಹಾಗೂ ದೊಡ್ಡ ಪ್ರತಿಗಾಮಿಗಳ ದಂಡೇ ಸುಪ್ರೀಂಕೋರ್ಟ್‌ನಲ್ಲಿ ಸ್ವರ್ಗಸದೃಶ ಆಶ್ರಯ ಪಡೆದಿದೆ...' ಎಂದು ಹೇಳಿದ್ದರು.

1988ರಲ್ಲಿ ಈ ಕುರಿತು ಆದೇಶ ನೀಡಿದ್ದ ಸುಪ್ರೀಂಕೋರ್ಟ್‌ನ ನ್ಯಾಯಾಧೀಶ ಸಬ್ಯಸಾಚಿ ಮುಖರ್ಜಿ, ಶಿವಶಂಕರ್ ಅವರ ಹೇಳಿಕೆಯಿಂದ ನ್ಯಾಯಾಂಗದ ಆಡಳಿತಕ್ಕೆ ಧಕ್ಕೆಯಾಗಿಲ್ಲ. ಆದರೆ, ಅವರಿಗಿರುವ ಕಾನೂನಿನ ಹಿನ್ನೆಲೆಯಲ್ಲಿ ಭಾಷೆ ಸ್ವಲ್ಪ ಮೃದುವಾಗಿರಬಹುದಿತ್ತು ಎಂದು ಹೇಳಿದ್ದರು. 'ಸುಪ್ರೀಂಕೋರ್ಟ್‌ನ ತೀರ್ಪುಗಳಿಂದ ಸಮಾಜವಿರೋಧಿ ಶಕ್ತಿಗಳಿಗೆ ಲಾಭವಾಗಿದ್ದರೆ ಅದಕ್ಕೆ ಕಾರಣ ಕಾನೂನಿನಲ್ಲಿರುವ ದೋಷಗಳು. ಕೋರ್ಟ್‌ಗಳು ಇಂತಹ ಟೀಕೆಗಳಿಗೆ ಎದೆಗುಂದುವುದಿಲ್ಲ' ಎಂದು ತಿಳಿಸಿದ್ದರು.

ನ್ಯಾಯಾಂಗ ನಿಂದನೆ ಪ್ರಕರಣಗಳಲ್ಲಿ ಸತ್ಯವೂ ಒಂದು ರಕ್ಷಣೆಯೇ. ಸಾರ್ವಜನಿಕ ಹಿತಾಸಕ್ತಿಯಿಂದ ನೀಡುವ ಕೃತ್ರಿಮವಲ್ಲದ ಹೇಳಿಕೆಯಿಂದ ನ್ಯಾಯಾಂಗ ನಿಂದನೆಯಾಗುವುದಿಲ್ಲ ಎಂದು 2010ರ ಪರೋಕ್ಷ ತೆರಿಗೆ ವೃತ್ತಿಪರರ ಸಂಘ ವರ್ಸಸ್ ಆರ್.ಕೆ.ಜೈನ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಹೇಳಿತ್ತು.

ಆದರೆ, ಈ ಯಾವುದೇ ಪ್ರಕರಣಗಳು ಸಾಮಾಜಿಕ ಹೋರಾಟಗಾರ್ತಿ ಅರುಂಧತಿ ರಾಯ್ ಅವರ ನೆರವಿಗೆ ಬರಲಿಲ್ಲ. ನ್ಯಾಯಾಂಗ ನಿಂದನೆ ಪ್ರಕರಣದಲ್ಲಿ ಅವರು ದೋಷಿ ಎಂದು ಸುಪ್ರೀಂಕೋರ್ಟ್ ತೀರ್ಪು

ನೀಡಿತ್ತು. ವಾಸ್ತವವಾಗಿ, ಅವರ ವಿರುದ್ಧ ದಾಖಲಾಗಿದ್ದ ನ್ಯಾಯಾಂಗ ನಿಂದನೆ ಪ್ರಕರಣವನ್ನು ಸುಪ್ರೀಂಕೋರ್ಟ್ ವಜಾಗೊಳಿಸಿತ್ತು, ಆದರೆ ಆ ಪ್ರಕರಣದಲ್ಲಿ ರಾಯ್ ನೀಡಿದ್ದ ಹೇಳಿಕೆ ನ್ಯಾಯಾಂಗ ನಿಂದನೆಯಾಗಿತ್ತು.

ಆ ಹೇಳಿಕೆಯಲ್ಲಿ ರಾಯ್ ಅವರು ಸುಪ್ರೀಂಕೋರ್ಟ್ ಅನಗತ್ಯವಾಗಿ ಮತ್ತು ಅತ್ಯಾತುರದಲ್ಲಿ ಕ್ಷುಲ್ಲಕ ಅರ್ಜಿಯನ್ನು ಪರಿಗಣಿಸಿ ತೀರ್ಪು ನೀಡಿದೆ ಎಂದಿದ್ದರು. ಸರ್ದಾರ್ ಸರೋವರ ಡ್ಯಾಂ ಪ್ರಕರಣಕ್ಕೆ ಸಂಬಂಧಿಸಿದಂತೆ ಅವರು ಈ ಹೇಳಿಕೆ ನೀಡಿದ್ದರು. ಹುರುಳಿಲ್ಲದ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ಉದ್ದೇಶ ಪೂರ್ವಕವಾಗಿ ನೋಟಿಸ್ ಜಾರಿಗೊಳಿಸಿದೆ ಎಂಬ ಅರುಂಧತಿ ರಾಯ್ ಅವರ ಹೇಳಿಕೆಯಿಂದ ಜನರ ದೃಷ್ಟಿಯಲ್ಲಿ ನ್ಯಾಯಾಂಗದ ವಿಶ್ವಾಸರ್ಹತೆ ಮತ್ತು ಘನತೆಗೆ ಧಕ್ಕೆ ಬಂದಿದೆ. ಹಾಗಾಗಿ ರಾಯ್ ನ್ಯಾಯಾಂಗ ನಿಂದನೆ ಮಾಡಿದಂತಾಗಿದೆ ಎಂದು ಸುಪ್ರೀಂಕೋರ್ಟ್ ತೀರ್ಪು ನೀಡಿತ್ತು.

ಮೇಲಿನ ಎಲ್ಲ ಪ್ರಕರಣಗಳನ್ನು ಗಮನಿಸಿದರೆ, ಯಾವುದು ಕ್ರಿಮಿನಲ್ ನ್ಯಾಯಾಂಗ ನಿಂದನೆಗೆ ಕಾರಣವಾಗುವ ಹೇಳಿಕೆ ಮತ್ತು ಯಾವುದು ಅಲ್ಲ ಎಂಬುದು ಸಂಪೂರ್ಣವಾಗಿ ಆಯಾ ಹೇಳಿಕೆಗಳ ಸಂದರ್ಭ ಮತ್ತು ಅದಕ್ಕೆ ಸಂಬಂಧಿಸಿದ ಸಂಗತಿಗಳನ್ನು ಅವಲಂಬಿಸಿದೆ ಎಂಬುದು ಸ್ಪಷ್ಟವಾಗುತ್ತದೆ. ಒಟ್ಟಾರೆಯಾಗಿ, ಆತ್ಮಸಾಕ್ಷಿಗೆ ತಕ್ಕಂತೆ ನಡೆದುಕೊಳ್ಳುವ ಒಬ್ಬ ಗೌರವಾನ್ವಿತ ವ್ಯಕ್ತಿಯ ಟ್ವೀಟ್ ಅಥವಾ ಹೇಳಿಕೆಯಿಂದ ಭಾರತದ ನ್ಯಾಯಾಂಗದ ಘನತೆಗೆ ಯಾವ ಧಕ್ಕೆಯೂ ಉಂಟಾಗುವುದಿಲ್ಲ. ಲಾರ್ಡ್ ಡೆನ್ನಿಂಗ್ ಅವರನ್ನೇ ಮತ್ತೆ ನೆನೆಯುವುದಾದರೆ, 'ಅದರಿಂದ ನ್ಯಾಯಾಂಗದ ತಳಪಾಯ ಇನ್ನಷ್ಟು ಗಟ್ಟಿಯಾಗಬೇಕು.'

**ಲೇಖಕರು: ಗೌತಮ್ ಎಸ್.ರಾಮನ್**
**ಮದ್ರಾಸ್ ಹೈಕೋರ್ಟ್ ನ್ಯಾಯವಾದಿ,**
**ಆಧಾರ: ವಿಶ್ವವಾಣಿ, ದಿನಾಂಕ:19.08.2020**